ಶ್ರೀ ಆರ್.ವಿ. ದೇಶಪಾಂಡೆ: ಅಂಥ ಪ್ರಸ್ತಾವನೆ ಬಂದಿತ್ತು, ಅದು ಫೀಸಿಬಲ್ ಇಲ್ಲ, ಬಿಐಎಫ್ಆರ್ ಒಪ್ಪಿಕೊಂಡಿಲ್ಲ. ಇಷ್ಟು ನನಗೆ ಗೊತ್ತು.

(4) ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಅಧ್ಯಕ್ಷರು: ಹನ್ನೊಂದನೇಯ ವಿಧಾನ ಸಭೆಯ ಪ್ರಥಮ ಅಧಿವೇಶನವು ದಿನಾಂಕ: 25.10.1999ರಿಂದ 30.10.1999ರವರೆಗೆ ಮತ್ತು ದಿನಾಂಕ: 11, 12 ಮತ್ತು 13ನೇ ನವೆಂಬರ್ 1999ರಂದು ಸಮಾವೇಶಗೊಂಡು ಒಟ್ಟು 9 ದಿನಗಳ ಕಾರ್ಯಕಲಾಪಗಳನ್ನು ನಡೆಸಿ 38 ಗಂಟೆಗಳ ಕಾಲ ಸಭೆಯನ್ನು ನಡೆಸಿರುತ್ತದೆ.

ಅಧಿವೇಶನದ ಪ್ರಾರಂಭ ದಿನದಂದು ಹನ್ನೊಂದನೇ ವಿಧಾನ ಸಭೆಗೆ ಚುನಾಯಿತರಾದ ಸದಸ್ಯರುಗಳು ಹಂಗಾಮಿ ಸಭಾಧ್ಯಕ್ಷರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ದಿನಾಂಕ:25.10.1999ರಂದು 206 ಸದಸ್ಯರು, ದಿನಾಂಕ: 26.10.1999ರಂದು 15 ಸದಸ್ಯರು, ದಿನಾಂಕ: 28.10.1999ರಂದು 2 ಸದಸ್ಯರು ಮತ್ತು ದಿನಾಂಕ: 11.11.1999ರಂದು ಓರ್ವ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು. ಸಭಾಧ್ಯಕ್ಷರ ಚುನಾವಣೆಯು ದಿನಾಂಕ: 26.10.1999ರಂದು ನಡೆದಿದ್ದು, ಸಭಾಧ್ಯಕ್ಷನಾದ ನನ್ನನ್ನು ಸರ್ವಾನುಮತದಿಂದ ಚುನಾಯಿಸಿರುತ್ತಾರೆ.

ಈ ಅವಧಿಯಲ್ಲಿ ದಿನಾಂಕ 27ನೇ ನವೆಂಬರ್ 1999ರಂದು ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ, ಭಾಷಣ ಮಾಡಿರುತ್ತಾರೆ. ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಯು 5 ದಿವಸಗಳ ಕಾಲ ನಡೆದಿದ್ದು, 42 ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿರುತ್ತಾರೆ. ಚರ್ಚೆಯು ಸುಮಾರು 18 ಗಂಟೆಗಳ ಕಾಲ ನಡೆದು, ಚರ್ಚೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಇಂದು ಉತ್ತರ ನೀಡುವ ಮೂಲಕ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿದೆ.

ಈ ಅವಧಿಯಲ್ಲಿ ಇತ್ತೀಚೆಗೆ ನಿಧನರಾದ 6 ಮಂದಿ ಮಾಜಿ ವಿಧಾನ ಸಭೆಯ ಸದಸ್ಯರು, ಪತ್ರಕರ್ತ ಶ್ರೀ ವೈ.ಎನ್. ಕೃಷ್ಣಮೂರ್ತಿ ಮತ್ತು ಒರಿಸ್ಸಾದಲ್ಲಿ ಪ್ರಕೃತಿ ವಿಕೋಪದಿಂದ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಗಿದೆ.

ನಿಯಮ 60ರ ಮೇರೆಗೆ, 5 ನಿಲುವಳಿ ಸೂಚನೆಗಳು ಸ್ವೀಕರಿಸಿದ್ದು, ಮಾನ್ಯ ಸದಸ್ಯರುಗಳಿಗೆ ಪ್ರಾರಂಭಿಕವಾಗಿ ಪ್ರಸ್ತಾಪಿಸಲು ಅವಕಾಶ ನೀಡಿ ನಿಲುವಳಿ ಸೂಚನೆಗೆ ಒಪ್ಪಿಗೆಯನ್ನು ನಿರಾಕರಿಸಲಾಯಿತು. ಈ ಅವಧಿಯಲ್ಲಿ 86 ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿರುತ್ತದೆ. ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿದಂತೆ ಸಂವಿಧಾನ (ಎಂಭತ್ನಾಲ್ಕನೇ ತಿದ್ದುಪಡಿ) ವಿಧೇಯಕ, 1999ರ ತಿದ್ದುಪಡಿ ಸಮರ್ಥನೆಗೆ ನಿರ್ಣಯವನ್ನು ಮಂಡಿಸಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸುಲಲಿತವಾಗಿ ಸದನ ನಡೆಸಲು ನನ್ನೊಡನೆ ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿರೋಧಪಕ್ಷದ ನಾಯಕರಿಗೂ, ವಿವಿಧ ಪಕ್ಷಗಳ ನಾಯಕರುಗಳು, ವಿಧಾನ

ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ದೂರದರ್ಶನದ ಮಾಧ್ಯಮಗಳಿಗೂ, ವಿವಿಧ ಇಲಾಖಾ ಅಧಿಕಾರಿಗಳಿಗೂ ಹಾಗೂ ವಿಧಾನ ಸಭೆ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1.15ಕ್ಕೆ ಮುಕ್ತಾಯಗೊಂಡು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)